(ಶ್ರೀ ಡಿ. ದೇವರಾಜ ಅರಸ್)

ಅದಕ್ಕೆ ನಾನು ಒಪ್ಪಿಕೊಂಡಿದ್ದೇನೆ. ಈಗ ಅದಕ್ಕೆ ರೆಕ್ಯಾಚಾರ ಹಾಕುತ್ತಿದ್ದಾರೆ, ನಮ್ಮ ಅಧಿಕಾರಿಗಳನ್ನೂ ಸಹ ಅಲ್ಲಿಗೆ ಕಳುಹಿಸಿಕೊಟ್ಟಿದ್ದೇವೆ. ಮಹಾರಾಷ್ಟ್ರ ಅಧಿಕಾರಿಗಳಲ್ಲಿ ಈ ವಿಚಾರದಲ್ಲಿ ಸಮಾಲೋಚನೆ ಮಾಡಿ ಬೇಗನೆ ಒಂದು ಇತ್ಯರ್ಥಕ್ಕೆ ಬರಬೇಕಾಗಿದೆ. ನೀರನ್ನು ನಮಗೆ ಬಿಟ್ಟು ಕೊಡುತ್ತೇವೆಂದು ಹೇಳಿದ್ದಾರೆ. ಎಷ್ಟು ಭಾಗ ನಮಗೆ ಕಡಿಮೆ ಬೀಳುತ್ತದೋ ಅಷ್ಟು ಭಾಗವನ್ನು ಕೊಡುತ್ತೇವೆಂದು ಹೇಳಿದ್ದಾರೆ. ನಮ್ಮ ಜನಗಳಿಗೆ ಇರುವ ಕಷ್ಟವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಇದನ್ನು ಒಪ್ಪೋಣ. ಇನ್ನೂ ಸ್ವಲ್ಪ ಭಾಗವನ್ನು ಬಿಟ್ಟು ಕೊಡಿ ಎಂದು ಕೇಳಿದ್ದೇವೆ. ಅದು ಬಹುಶಃ ನನ್ನ ಆಶೆ. ಇನ್ನು ಎರಡು ಮೂರು ದಿವಸಗಳಲ್ಲಿ ಆ ಬಗ್ಗೆ ಒಂದು ತೀರ್ಮಾನಕ್ಕೆ ಬಾದು ನೀರನ್ನು ಬಿಡಿಸಿಕೊಳ್ಳುತ್ತಿದ್ದೇವೆ. ನಮ್ಮ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳು ಸಹಾನುಭೂತಿಯಿಂದ ಇದನ್ನು ನೋಡುತ್ತಿದ್ದಾರೆಂದು ನಮ್ಮ ನಂಬಿಕೆ. ಕೊಡಗಿನ ಒಂದು ಸ್ಥಳದಲ್ಲಿ ಪಶ್ಚಿಮಕ್ಕೆ ಹೋಗುವ ನೀರನ್ನು ದಕ್ಷಿಣದ ಕಡೆಗೆ ಹರಿಸುವುದಕ್ಕೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಇದೆ. ಆ ಹೊಳೆಯ ಹೆಸರು ನನಗೆ ಗೊತ್ತಿಲ್ಲ. ಡ್ಯಾಂ ಕನ್‌ಸ್ಟ್ರಕ್ಟ್ ಮಾಡಿ ನೀರನ್ನು ಡೈವರ್ಟ್ ಮಾಡಿದರೆ ಕನ್ನಂಬಾಡಿಯಲ್ಲಿ 8 ಅಥವಾ 9 ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ತರುವುದಕ್ಕೆ ಸಾಧ್ಯವಿದೆ. ಇಂಥಾದ್ದನ್ನು ಮಾಡಬೇಕಾದರೆ ಸಮಗ್ರದೃಷ್ಟಿಯಿಂದ ನೋಡತಕ್ಕ ಕಾರ್ಯಕ್ರಮಗಳಿಂದ ಮಾತ್ರ ಸಾಧ್ಯ. ಹಾಗಿಲ್ಲದೆ ಹೋದರೆ ಪ್ರತಿಯೊಂದು ವಿಚಾರದಲ್ಲಿಯೂ ನಾವೇ ಬೇರೆ, ನೀವೇ ಬೇರೆ ಎಂದು ಹೇಳಬೇಕಾಗುತ್ತದೆ. ಇವರು ಮೈಸೂರು ರಾಜ್ಯದವರು, ಇವರು ಹೊರಗಡೆಯವರು ಎಂಬುದಾಗಿ ನೋಡಿಕೊಳ್ಳುವ ಒಂದು ದೃಷ್ಟಿಕೋಣದ ವ್ಯತ್ಯಾಸದಿಂದ ಇಡೀ ದೇಶದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುತ್ತವೆ. ಈ ಕಾರಣದಿಂದ ಅವರು ಕೇವಲ ತುಂಗಭದ್ರಾ ನೀರನ್ನು ಕೊಡುವ ದೃಷ್ಟಿ ಮಾತ್ರ ಅವರಲ್ಲಿ ಈಗ ಉದ್ಭವಿಸಿದೆ ಎಂಬ ಅಪನಂಬಿಕೆಯನ್ನು ನಾವು ಇಟ್ಟು ಕೊಳ್ಳುವ ಅಗತ್ಯವಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತುಂಗಭದ್ರಾ ನೀರಿನ ಅಂತಿಮ ಹಂಚಿಕೆಯ ಬಗ್ಗೆ ಕೃಷ್ಣಾ ಟ್ರಿಬ್ಯೂನರ್ ಅವರಿಂದ ಅಂತ್ಯವಾಗಿ ನಿರ್ಧಾರವಾದ ಮೇರೆ ಈ ಯೋಜನೆಯನ್ನು ಕೈಕೊಳ್ಳಬಹುದಾಗಿದೆ ಎಂಬುದಾಗಿ ಹೇಳಿದ್ದೀರಿ. ಈಗ ಕೃಷ್ಣಾ ಟ್ರಿಬ್ಯೂನರ್ ಯಾವ ಸ್ಟೇಜಿನಲ್ಲಿ ಕೆಲಸ ಮಾಡುತ್ತಿದೆ ?

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ಅದು ಕೊನೆಯ ಹಂತದಲ್ಲಿದೆ. ಅದಕ್ಕೆ ಉತ್ತರವನ್ನು ಈಗಾಗಲೇ ಹೇಳಿದ್ದೇನೆ.

MADAM SPEAKER.—Questions are over. Now Short Notice Question No. 2 by Sri J. P. Sarwesh but the hon. member is absent.

SHORT NOTICE QUESTION FOR ANSWER

(but not taken up)

Communal Disturbances in Gulbarga Town

4. Sri J. P. SARWESH (Sedum).—

Will the Chief Minister be pleased to state :—

(*a*) whether there were communal disturbances in Gulbarga Town from 28th February to 2nd March 1972 ;

(*b*) whether it is a fact that shops and houses of minority community people were burnt ;

(*c*) the total number of shops and houses burnt ;

(*d*) the number of people wounded and number of people died in the disturbances;

(*e*) the estimated loss of property;

(*f*) the number of persons arrested and the number of persons charge sheeted?

Sri D. DEVARAJ URS (Chief Minister).—

(*a*) Yes.

(*b*) Shops and houses of members of minority community as also the members of other communities were burnt during these disturbances.

(*c*) 344.

(*d*) Number of persons wounded : 156 (including Police and Home Guards).

Number of persons died : Two.

(*e*) Rs. 3,29,725.

(*f*) Number of persons arrested : 140.

Number of persons charge sheeted : 31.

Notice of Adjournment Motion *Re*: Strike at the Ruby Rubber Works, Bangalore.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ನಾನು ಇವತ್ತು ಬೆಳಿಗ್ಗೆ ತಮಗೆ ಒಂದು ಅಡ್ಜರ್ನ್‌ಮೆಂಟ್‌ಮೋಷನ್ ಕಳುಹಿಸಿದ್ದೆ. ನಿನ್ನೆ ದಿವಸ ಒಂದು ಘಟನೆ ಬೆಂಗಳೂರಿನಲ್ಲಿ ನಡೆದಿದೆ. ರೂಬಿ ರಬ್ಬರ್ ವರ್ಕ್ಸ್ ಫ್ಯಾಕ್ಟರಿಯಲ್ಲಿ ಸುಮಾರು 200-250 ಜನರು ಕೆಲಸಮಾಡುತ್ತಿದ್ದಾರೆ. ಅಲ್ಲಿ ಐದಾರು ದಿವಸಗಳಿಂದಲೂ ಸ್ಟ್ರೈಕ್ ಮಾಡಿದ್ದಾರೆ. ಫ್ಯಾಕ್ಟರಿಯೊಳಗೆ ನಿನ್ನೆ ದಿವಸ ಅಲ್ಲಿನ ಸಾಮಾನುಗಳನ್ನು ಮಾಲೀಕ ಲಾರಿಯಲ್ಲಿ ಸಾಗಿಸಬೇಕೆಂದು ಯೋಚನೆ ಮಾಡಿ ಪೋಲೀಸ್‌ನವರನ್ನು ಸಹಾಯ ಮಾಡಬೇಕೆಂದು ಕೇಳಿಕೊಂಡನು. ಆದರಂತೆ ಪೋಲೀಸಿನವರು ಈ ವಿಚಾರದಲ್ಲಿ ಕುಮ್ಮಕ್ಕು ಕೊಟ್ಟು ಅಲ್ಲಿದ್ದವರಿಗೆ ಲಾಠಿ ಚಾರ್ಜ್ ಮಾಡಿ, ಅಲ್ಲಿದ್ದ ಚೆಂಟನ್ನು ಕಿತ್ತುಕೊಂಡು ಹೋಗಿ ಅನೇಕರಿಗೆ ಹೊಡೆದು ಸುಮಾರು 20 ಜನರಿಗೆ ಗಾಯಗಳಾಗಿವೆ. ಅವರಲ್ಲಿ ಕೆಲವರನ್ನು ಆಸ್ಪತ್ರೆಗೆ ಸೇರಿಸಿದ್ದಾರೆ. ಶಾಂತರೀತಿಯಿಂದ ಇದ್ದಂಥ ಕಾರ್ಮಿಕರ ಮೇಲೆ ಪೋಲೀಸಿನವರು ಮಾಲೀಕನಿಗೆ ಕುಮ್ಮಕ್ಕು ಕೊಟ್ಟು ಹೊಡಿಸಿದರು. ಇದರಿಂದ ವಿರೋಧಾಭಾಸವುಂಟಾಗಿದೆ. ಶ್ರೀಮಾನ್ ಅಬಿದ್ ಸೇಟ್ ಅವರು ಇಂದು ಪೋಲೀಸಿನವರ ನೀತಿಯ ಬಗ್ಗೆ ಮಾತನಾಡುತ್ತಾ ಕೈಗಾರಿಕೆ ಕ್ಷೇತ್ರದಲ್ಲಿ ಇಂತಹ ವೈಷಮ್ಯಗಳು ತಲೆದೋರಿದಾಗ ಕಾರ್ಮಿಕರು ಹಾಗೂ ಮಾಲೀಕರು ಶಾಂತ ರೀತಿಯಲ್ಲಿ ವರ್ತಿಸಬೇಕೆಂದು ಹೇಳಿದ್ದರೂ ಅವರ ಒಂದು ಹೇಳಿಕೆಯ ವಿರುದ್ಧವಾಗಿ ಅಲ್ಲಿ ಪೋಲೀಸಿನವರು ನಡೆದುಕೊಂಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಆಲ್ಲಿ ವೈಯಕ್ತಿಕವಾಗಿ ನಾನು ಒಬ್ಬರ ಮೇಲೆಯೇ ಮಾತನಾಡುತ್ತಿದ್ದೇನೆ ಎಂಬುದಾಗಿ ಯಾರೂ ತಿಳಿಯಬಾರದು. ಪೋಲೀಸ್ ಅಧಿಕಾರಿಗಳು ಈಗ ಯಾರು ಇದ್ದಾರೆ ಅವರು ಟ್ರಿಗ್ಗರ್ ಹ್ಯಾಪಿ ಅಂತಾರಲ್ಲ ಹಾಗೆ ಲಾಠಿ ಹ್ಯಾಪಿ ಪರ್ಸನಾಲಿಟಿಯ ಹಾಗೆ ಇದ್ದಾರೆ. ಆ ಫ್ಯಾಕ್ಟರಿಯಲ್ಲಿರುವ ಒಬ್ಬ ಮನುಷ್ಯ ಇದಕ್ಕೆಲ್ಲಾ ಕಾರಣಕರ್ತನಾಗಿದ್ದಾನೆ. ಒಬ್ಬ ಪೋಲೀಸ್ ಅಧಿಕಾರಿಯೂ ಕಾರಣ ಕರ್ತರಾಗಿದ್ದಾನೆ. ಆದ್ದರಿಂದ ಅಂತಹ ವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಹಿಂದೆ ಎನ್.ಜಿ.ಇ.ಎಫ್. ಬಗ್ಗೆ ಆ ಪೋಲೀಸ್ ಅಧಿಕಾರಿ ಯಾವ ವರ್ತನೆ ಮಾಡಿದ್ದನೋ ಅದೇ